# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.419/2009/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 31.8.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ತಿಪಟೂರು ತಾಲ್ಲೂಕು ಕರಡಿ ಗ್ರಾಮ ಪಂಚಾಯತಿಯ ಗ್ರಾಮೀಣ ಆಶ್ರಯ ಯೋಜನೆಯ 2005-06 ಮತ್ತು 2006-07ನೇ ಸಾಲಿನ ಅನುದಾನ ರೂ.40,000/-ಗಳನ್ನು 2ನೇ ಎದುರುದಾರರು ದುರುಪಯೋಗ ಪಡಿಸಿಕೊಂಡಿದ್ದು, ಅದನ್ನು ಅವರಿಂದ ವಸೂಲು ಮಾಡಿ ಸರ್ಕಾರಕ್ಕೆ ಜಮೆ ಮಾಡಲು, ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ. ಎನ್.ಎಮ್.ಸುರೇಶ, ನ್ಯಾಕೇನಹಳ್ಳಿ ಗ್ರಾಮದ ನಿವಾಸಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಕೆ.ಆರ್.ದೇವರಾಜು, ಅಧ್ಯಕ್ಷರು, (2) ಶ್ರೀ **ಜಾನಿ ನಾಪೆಲ್ ಬಿ.ರೋಡ್ರಿಕ್ಸ್, ಕಾರ್ಯದರ್ಶಿ, ಕರಡಿ *ಗ್ರಾಮ ಪಂಚಾಯತಿ, ತಿಪಟೂರು ತಾಲ್ಲೂಕು,* ತುಮಕೂರು ಜಿಲ್ಲೆ,** (ಇನ್ನು ಮುಂದೆ ಕ್ರಮವಾಗಿ " 1 ಮತ್ತು 2ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತಿಪಟೂರು ತಾಲ್ಲೂಕು ಕರಡಿ ಗ್ರಾಮ ಪಂಚಾಯತಿಯಲ್ಲಿ ಎದುರುದಾರರು 2007-08ನೇ ಸಾಲಿನ ಹಣಕಾಸು ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಕಾಮಗಾರಿ ನಿರ್ವಹಿಸದೆ ಬಿಲ್ ಮಾಡಿ ಹಣ ದುರುಪಯೋಗ ಮಾಡಿರುತ್ತಾರೆ. 2006-07ನೇ ಸಾಲಿನ ಗ್ರಾಮೀಣ ವಸತಿ ಯೋಜನೆಯಡಿ ಮಂಜೂರಾದ ಮನೆಗಳನ್ನು ದಾಖಲೆ ಪಡೆಯದೆ, ಮನೆಗಳನ್ನು

ನಿರ್ಮಿಸದೆ ಬಿಲ್ ಪಾವತಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಈ ಪ್ರಕರಣವನ್ನು ತನಿಖೆ ಮಾಡಿ ವರದಿ ಸಲ್ಲಿಸಲು ತಾಂತ್ರಿಕ ವಿಭಾಗಕ್ಕೆ ವಹಿಸಿದ್ದು, ಅವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ.

4. ಎದುರುದಾರರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ತುಮಕೂರು, ಇವರಿಗೆ ಸಲ್ಲಿಸಿರುವ ಹೇಳಿಕೆಯಲ್ಲಿ ತಾವು ಯಾವುದೇ ಹಣಕಾಸು ದುರುಪಯೋಗ ಪಡಿಸಿಕೊಂಡಿರುವುದಿಲ್ಲ. 2005–06, 2007–08ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳಿಗೆ ಮನೆ ಕಟ್ಟಿದ ನಂತರವೇ ಬಿಲ್ ಪಾವತಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

6. ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ, ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ತಾಂತ್ರಿಕ ವಿಭಾಗದವರ ತನಿಖಾ ವರದಿಯಲ್ಲಿ 2006–07ನೇ ಸಾಲಿನ ಆಶ್ರಯ ವಸತಿ ಯೋಜನೆ ಮತ್ತು 2007–08ನೇ ಸಾಲಿನ ಎಸ್.ಜಿ.ಆರ್.ವೈ ಯೋಜನೆಯಡಿ ಕಾಮಗಾರಿ ಕುರಿತು ತನಿಖೆ ನಡೆಸಿ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಎದುರುದಾರರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿ, ತುಮಕೂರು, ಇವರ ಆದೇಶ ಸಂ.ತುಜಿಪ/ಸಭಾ/ಸಿ(2)/ವಿವ–06/2008–09 ದಿ.3.11.2008ರ ಆದೇಶದ ಪ್ರಕಾರ ಅಮಾನತ್ತು ಮಾಡಿರುತ್ತಾರೆಂದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತನಿಖಾಧಿಕಾರಿಗಳಿಗೆ ದಾಖಲೆ ನೀಡಿರುತ್ತಾರೆ.

7. 2005–06ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯ ಫಲಾನುಭವಿಯಾದ ಮಹದೇವಮ್ಮ ಕೋಂ.ಚನ್ನಿಗರಾಯಪ್ಪ ಶೆಟ್ಟಿಹಳ್ಳಿ ಇವರ ಮನೆಯನ್ನು ಪರಿಶೀಲಿಸಲಾಗಿ ಫಲಾನುಭವಿಯು ಪರಿಶಿಷ್ಟ ಜಾತಿಗೆ ಸೇರಿದ್ದು ಮನೆಯು ಹಳೆದಾಗಿದ್ದು ಖಾಲಿ ಹಂಚನ್ನು ಮಾತ್ರ ಬದಲಿಸಿರುತ್ತಾರೆ. ಆದರೆ ಹೊಸ ಮನೆಯನ್ನು ನಿರ್ಮಿಸದೆ ಹಳೆಯ ಮನೆಯನ್ನು ರಿಪೇರಿ ಮಾಡಿಸಿರುತ್ತಾರೆ. ಈ ಬಗ್ಗೆ ದಾಖಲೆ

ಪರಿಶೀಲಿಸಿದಾಗ ಮಹದೇವಮ್ಮ ಅವರ ಹೆಸರು ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಅನುಮೋದನೆಗೊಂಡ ಪಟ್ಟಿಯಲ್ಲಿರುತ್ತದೆ. 2005-06ನೇ ಸಾಲಿನ ಯೋಜನೆಯಲ್ಲಿ ಮನೆ ಮಂಜೂರಾಗಿದ್ದು, ಇವರು ಬೇರೆಯವರಿಂದ ಸಾಲ ಪಡೆದು ಮನೆಯನ್ನು ಪೂರ್ಣಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತಿಯಿಂದ ಮನೆ ಕಟ್ಟುವ ಲೈಸೆನ್ಸು 16.3.2008ರಂದು ನೀಡಿದ್ದು, ಆದರೆ ಮನೆ ನಿರ್ಮಿಸುವ ಹಂತದಲ್ಲಿ ಯಾವುದೇ ಗುರುತು ಪುರಾವೆಗಳನ್ನು ಸಲ್ಲಿಸದಿದ್ದರೂ ಸಹ ಅಧ್ಯಕ್ಷರ ಸಹಿ ಇಲ್ಲದೆ ಮೊದಲ ಬಿಲ್ಲನ್ನು 10.6.2008ರಂದು ರೂ.5000/-ಗಳನ್ನು, ದಿ.27.6.2008ರಂದು ರೂ.5000/-ಗಳನ್ನು ಕೇವಲ 17 ದಿನಗಳ ಅಂತರದಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ರೀತಿಯಾಗಿ ಇಲ್ಲಿ ಹಣ ಅವ್ಯವಹಾರ ನಡೆದಿರುತ್ತದೆಂದು ತನಿಖಾ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತಾರೆ.

8. 2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಪುಟ್ಟ ನರಸಮ್ಮ ಕೋಂ.ಹುಚ್ಚಪ್ಪ ಶೆಟ್ಟಿಹಳ್ಳಿ, ಇವರ ಮನೆಯನ್ನು ಪರಿಶೀಲಿಸಿದಾಗ ಮನೆಯು ಹಳೆಯದಾಗಿದ್ದು, ಮುಂದಿನ ವರಾಂಡದ ಭಾಗವನ್ನು ಮಾತ್ರ ವಿಸ್ತರಿಸಿಕೊಂಡಿರುತ್ತಾರೆ. ಈ ಬಗ್ಗೆ ಕಡತ ಪರಿಶೀಲಿಸಲಾಗಿ ಇವರ ಹೆಸರು ಫಲಾನುಭವಿಗಳ ಪಟ್ಟಿಯಲ್ಲಿದ್ದು, ಆದರೆ ಒಂದೇ ಒಂದು ಫೋಟೋ ಸಹ ಲಭ್ಯವಿರುವುದಿಲ್ಲ. ಮನೆ ನಿರ್ಮಾಣವನ್ನು ಕೇವಲ 2 ತಿಂಗಳಲ್ಲಿ ಪೂರ್ಣಗೊಳಿಸಿ ಚೆಕ್ ನೀಡಿರುವುದು ಕಂಡುಬರುತ್ತದೆ. ದಿ.1.4.2008 ರಂದು ರೂ.5000/-, ದಿ.2.5.2008, 13.5.2008, 27.5.2008ರಂದು ಕ್ರಮವಾಗಿ ಎರಡು, ಮೂರು, ನಾಲ್ಕನೇ ಹಂತದ ಚೆಕ್ಕುಗಳನ್ನು ಕ್ರಮವಾಗಿ ರೂ.7000/-,ರೂ.8000/- ಮತ್ತು ರೂ.10,000/-ಗಳಂತೆ ಒಂದೇ ತಿಂಗಳಲ್ಲಿ ಅಧ್ಯಕ್ಷರ ಸಹಿಯಿಲ್ಲದೆ 2ನೇ ಎದುರುದಾರರಾದ ಜಾನಿ ನಾವೆಲ್ ರೋಡ್ರಿಕ್ಸ್ ರವರು ಪಾವತಿಸಿರುತ್ತಾರೆ. ಆದ್ದರಿಂದ ಇವರು ಕರ್ತವ್ಯಲೋಪವೆಸಗಿದ್ದಾರೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

9. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳ ತನಿಖೆ ನಡೆಸಿ 2ನೇ ಎದುರುದಾರರಾದ ಜಾನಿ ನಾವೆಲ್ ರೋಡ್ರಿಕ್ಸ್ ಅವರನ್ನು ಅಮಾನತ್ತುಗೊಳಿಸಿ ನಂತರ ತನಿಖೆಯನ್ನು ಕಾಯ್ದಿರಿಸಿ ಪುನ: ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿರುತ್ತಾರೆ. ಕರಡಿ ಗ್ರಾಮ ಪಂಚಾಯತಿ ಕಛೇರಿಗೆ ಬೆಂಕಿ ಅವಘಡ ಸಂಭವಿಸಿದ ಹಿನ್ನೆಲೆಯಲ್ಲಿ ಪೋಲೀಸರಿಗೆ ದೂರು ನೀಡಿದ ಬಗ್ಗೆ ಹಾಗೂ ದಾಖಲೆಗಳು

ಸುಟ್ಟುಹೋದ ಬಗ್ಗೆ ಪೋಲೀಸರು ಮಹಜರು ಮಾಡಿದ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.

10. ಈ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, 2ನೇ ಎದುರುದಾರರಾದ ಜಾನಿ ನಾವೆಲ್ ರೋಡ್ರಿಕ್ಸ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಮನೆ ನಿರ್ಮಿಸದಿದ್ದರೂ ಫಲಾನುಭವಿಗಳಿಗೆ ಚೆಕ್ ನೀಡಿ ಅವ್ಯವಹಾರವೆಸಗಿರುತ್ತಾರೆಂದು ಕಂಡುಬರುತ್ತದೆ. ಇವರು ಈ ರೀತಿ ಅವ್ಯವಹಾರ ಮಾಡಿದ ಕಾರಣ ಇವರನ್ನು ಸೇವೆಯಿಂದ ಅಮಾನತ್ತು ಮಾಡಿ, ಪುನ: ವಿಚಾರಣೆಯನ್ನು ಕಾಯ್ದಿರಿಸಿ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿರುತ್ತಾರೆ.

11. 2ನೇ ಎದುರುದಾರರಾದ ಜಾನಿ ನಾವೆಲ್ ರೋಡ್ರಿಕ್ಸ್‌ರವರು ಈ ಕೆಳಗಿನಂತೆ ಅವ್ಯವಹಾರ ಮಾಡಿರುತ್ತಾರೆ.

| ಕ್ರ ಸಂ. | ಸಾಲು | ಫಲಾನುಭವಿಯ ಹೆಸರು | ನಿವೇಶನದ ಹಾಲಿ ಪರಿಸ್ಥಿತಿ | ಅವ್ಯವಹಾರದ ಮೊತ್ತ | ಅಧಿಕಾರಿಯ ಹೆಸರು |
|---|---|---|---|---|---|
| 1 | 2005-06ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ | ಮಹದೇವಮ್ಮ ಕೋಂ ಚನ್ನಿಗರಾಯಪ್ಪ ಶೆಟ್ಟಿಹಳ್ಳಿ | ಮನೆ ನಿರ್ಮಾಣ ಮಾಡದೆ ಹೊಸ ಹೆಂಚಿನ ಛಾವಣಿ ಹಾಕಿರುತ್ತಾರೆ. | ರೂ.10,000/-- | ಶ್ರೀ ಜಾನಿ ನಾವೆಲ್ ರೋಡ್ರಿಕ್ಸ್ |
| 2 | 2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ | ಪುಟ್ಟನರಸಮ್ಮ ಕೋಂ ಲೇ.ಹುಚ್ಚಪ್ಪ ಶೆಟ್ಟಿಹಳ್ಳಿ | ವರಾಂಡ ಮಾತ್ರ ನಿರ್ಮಿಸಿರುತ್ತಾರೆ | ರೂ.30,000/-- | ಶ್ರೀ ಜಾನಿ ನಾವೆಲ್ ರೋಡ್ರಿಕ್ಸ್ |

12. 2ನೇ ಎದುರುದಾರರಾದ ಜಾನಿ ನಾವೆಲ್ ರೋಡ್ರಿಕ್ಸ್‌ರವರು ಒಟ್ಟು ರೂ.40,000/-ಗಳ ಆಶ್ರಯ ಯೋಜನೆಯ ಅನುದಾನವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

13. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 2ನೇ ಎದುರುದಾರರು ತಿಪಟೂರು ತಾಲ್ಲೂಕು ಕರಡಿ ಗ್ರಾಮ ಪಂಚಾಯತಿಯ ಗ್ರಾಮೀಣ ಆಶ್ರಯ ಯೋಜನೆಯ 2005–06 ಮತ್ತು 2006–07ನೇ ಸಾಲಿನ ಅನುದಾನ ರೂ.40,000/– ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ರುಜುವಾತಾದ ಕಾರಣ ಅದನ್ನು 2ನೇ ಎದುರುದಾರರಿಂದ ವಸೂಲು ಮಾಡಿ ಸರ್ಕಾರಕ್ಕೆ ಜಮೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

Sd/- 31/8/17

(ನ್ಯಾಯಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.